ಅಸಲು ದಾವಾ ಸಂಖ್ಯೆ .276/2014

ಡಿ.ಡಬ್ಲ್ಯೂ-03
ದಿಃ 02-12-2021

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ಶ್ರೀಹೆಚ್ ಜಿ ಎಸ್ ವಕೀಲರಿಂದ ಃ-

ವಾದಿಯ ಪರಿಚಯ ನನಗೆ ಇರುತ್ತದೆ . ಅವರು ನನ್ನ ವಿರುದ್ದ ಒತ್ತುವರಿ ಮಾಡಿರುತ್ತಾರೆ ಎಂದು ದಾವಾ ಹೂಡಿರುತ್ತಾರೆ . ನನ್ನ ಪ್ರಮಾಣ ಪತ್ರದಲ್ಲಿ ಇರುವ ವಿಚಾರಗಳು ನನಗೆ ಗೊತ್ತಿರುತ್ತದೆ . ದಾವಾ ಆಸ್ತಿಯ ಸಂಖ್ಯೆ ಮತ್ತು ಚೆಕ್ಕು ಬಂಧಿ ನನಗೆ ಗೊತ್ತಿರುವುದಿಲ್ಲ . ಜಂಜರ್ 263 ಆಸ್ತಿ ಸಂಖ್ಯೆ 206 , 255 ಎ ಆಗಿರುತ್ತದೆ ಎಂದು ಸೂಚಿಸಿದರೆ ಇರಬಹುದು . ಅದರ ಅಳತೆ ಪೂರ್ವ ಪಶ್ಚಿಮ 27 ಗಜ ಉತ್ತರ ದಕ್ಷಿಣ 20 ಗಜ ಎಂದು ಸೂಚಿಸಿದರೆ ಸರಿಯಲ್ಲ . ಅದರಲ್ಲಿ ವಾದಿಯ 17 ½ ಅಡಿ X 78 ಅಡಿ ಮನೆಕಟ್ಟಿರುತ್ತಾರೆ ಎಂದರೆ ಸರಿ. ಅವರ ಆಸ್ತಿಯನ್ನು ನಾನು ಮತ್ತು 1 ಮತ್ತು 2 ನೇ ಪ್ರತಿವಾದಿ ಒತ್ತು ವರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನೀವು ಒತ್ತುವರಿ ಮಾಡಿರುವ ಜಾಗದ ಚೆಕ್ಕುಬಂದಿ ಪೂರ್ವಕ್ಕೆ ಜಮೀನು , ಪಶ್ಚಿಮಕ್ಕೆ ರಸ್ತೆ , ಉತ್ತರಕ್ಕೆ ಗೋವಿಂದಪ್ಪ ಬಿನ್ ನಾರಾಯಣಪ್ಪ , ದಕ್ಷಿಣಕ್ಕೆ ರಾಮಪ್ಪ ಬಿನ್ ಕಂಡ್ಯಪ್ಪ ಮತ್ತು 3 ನೇ ಪ್ರತಿವಾದಿ ಅಂಗಡಿ ಇರುತ್ತದೆ ಎಂದರೆ ಸುಳ್ಳು . ಪೂರ್ವ ಪಶ್ಚಿಮ 25 ಅಡಿ ಉತ್ತರ ದಕ್ಷಿಣ 81 ಅಡಿ ಒತ್ತುವರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯ ಆಸ್ತಿಯ ದಕ್ಷಿಣ ಭಾಗಕ್ಕೆ ನಾನು ಒತ್ತುವರಿ ಮಾಡಿರುತ್ತೇನೆ ಎಂದು ಸೂಚಿಸಿದರೆ ಸರಿಯಲ್ಲ.

ದಾವಾ ಆಸ್ತಿ ವಾದಿಗೆ ಹೇಗೆ ಬಂತುಎಂದು ನನಗೆ ಗೊತ್ತಿರುವುದಿಲ್ಲ . ಕಾಳಮ್ಮ ಬಿನ್ ಹುಚ್ಚಮ್ಮ ರವರಿಗೆ ಸೇರಿದ ಆಸ್ತಿ ಎಂದರೆ ಇರಬಹುದು . ಸದರಿ ಕಾಳಮ್ಮ ಬಿನ್ ಹುಚ್ಚಪ್ಪ ರವರು ದಾವಾ ಆಸ್ತಿಯನ್ನು 1997 ರಲ್ಲಿ ರಂಗಪ್ಪ ಬಿನ್ ಮಹದೇವಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಎಂದು ಸೂಚಿಸಿದರೆ ಗೊತ್ತಿರುವುದಿಲ್ಲ . 1992 ರಲ್ಲಿ ರಂಗಪ್ಪ ರವರು ದಾವಾ ಆಸ್ತಿಯನ್ನು ಹುಚ್ಚಪ್ಪ ತಂದೆ ವೀರಬಸಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ . 1992 ರಲ್ಲಿ ಮಾರಾಟ ಮಾಡಿದಾಗ ಅವರ ಕ್ರಯಪತ್ರದಲ್ಲಿ ತಪ್ಪಾಗಿ ವಿಸ್ತೀರ್ಣ ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಆದ ಕಾರಣ ದಾವಾ ಆಸ್ತಿಯ ಸಂಪೂರ್ಣ ಹಕ್ಕುದಾರಳು ಮತ್ತು ಮಾಲೀಕಳು ವಾದಿ ಯಾಗಿರುತ್ತಾರೆ ಎಂದುಸೂಚಿದರೆ ನನಗೆ ಗೊತ್ತಿಲ್ಲ .

ವಾದಿಯು ದಾವಾ ಆಸ್ತಿಯಲ್ಲಿ ಆರ್ ಸಿಸಿ ಮನೆಕಟ್ಟಿಕೊಂಡಿರುತ್ತಾರೆ ಎಂದರೆ ಸರಿ.

ಕಮಲಮ್ಮ ಗಂಡ ಹುಚ್ಚಪ್ಪ ವಾದಿಯ ಅತ್ತೆ ನನಗೆ ಗೊತ್ತು ಅವರು ಪಕ್ಕದವರು . 2011 ರಲ್ಲಿ ಮಹಾದೇವಪ್ಪ ರವರಿಂದ ವಾದಿಯ ಅತ್ತೆರವರು ಕ್ರಯಕ್ಕೆ 78 X17 ½ ಅಡಿ ಖರೀದಿ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕಮಲಮ್ಮ ರವರು ಒಪ್ಪಿಗೆಯ ಮೇರೆ ದಾವಾ ಆಸ್ತಿಯು ವಾದಿಯ ಹೆಸರಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ . ಆದ ಕಾರಣ ವಾದಿಯು ದಾವಾ ಆಸ್ತಿಯ ಮಾಲೀಕಳು ಎಂದರೆ ನನಗೆ ಗೊತ್ತಿಲ್ಲ .

ದಾವಾ ಆಸ್ತಿಯನ್ನು ವಾದಿಯ ಅತ್ತೆ ಕಮಲಮ್ಮ ರವರು ಪ್ರಕಾಶ್ ಎಂಬುವವರಿಗೆ ಅಡಮಾನ ಪಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ . ನಂತರ ಕ್ರಯಪತ್ರದ ಮೂಲಕ ವಾಪಾಸ್ಸು ಬರೆಯಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಎಲ್ಲಾ ವಿಚಾರಗಳು ನಾನು ಪಕ್ಕದ ಮನೆಯವರಾಗಿದ್ದು ಗೊತ್ತಿದದರು ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ . ನಾನು ಮತ್ತು ಪ್ರತಿವಾದಿಯ ವಾದಿಯು ಮನೆ ಕಟ್ಟುವ ಕಾಲಕ್ಕೆ ಅವರ ಜಾಗದಲ್ಲಿ ಹಸ್ತಕ್ಷೇಪ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಮತ್ತು ವಾದಿಯ ನಡುವೆ ಗಲಾಟೆಯಾಗಿತ್ತು ಎಂದರೆ ಸರಿಯಲ್ಲ. ವಾದಿ ಮತುತ ರಾಮಪ್ಪ ರವರ ನಡುವೆ ಗಲಾಟೆಯಾಗಿರುತ್ತದೆ . ಯಾವ ವಿಚಾರದಲ್ಲಿಗಲಾಟೆಯಾಯಿತು ಎಂದು ನನಗೆ ಗೊತ್ತಿರುವುದಿಲ್ಲ . ಒತ್ತುವರಿ ವಿಚಾರದಲ್ಲಿ ಗಲಾಟೆಯಾಗಿತು ಎಂದು ಸೂಚಿಸಿದರೆ ನನಗೆ ಗೊತ್ತಿಲ್ಲ .

ನಾನು ಮತ್ತು ಇತರ ಪ್ರತಿವಾದಿಯರು ಸೇರಿ 2014 ರಲ್ಲಿ ಗಲಾಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ವಾದಿಯು ಸಂಪೂರ್ಣ ಮಾಲೀಕರು ಮತ್ತು ಹಕ್ಕುದಾರರು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೂ ಮತ್ತು ಪ್ರತಿವಾದಿಯರರಿಗೆ ಯಾವುದೇ ಹಕ್ಕು ಬಾದ್ಯತೆ ಇಲ್ಲ ಎಂದರೆ ಸರಿಯಲ್ಲ. ವಾದಿಯ ಆಸ್ತಿಯನ್ನು ಬಿಟ್ಟುಕೊಡಲು ನಾವು ಬಾದ್ಯಸ್ತರು ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

ಪಾಟೀ ಸವಾಲು 02 ನೇ ಪ್ರತಿವಾದಿ ಪರ ಶ್ರೀ ವಕೀಲರಿಂದ ಃ-

ನನ್ನ ಆಸ್ತಿಯ ಪೂರ್ವ ದಿಕ್ಕಿಗೆ ಕಂಡ್ಯಾಪ್ಪ ಮತ್ತು ರಾಮುಜಿ (02 ನೇ ಪ್ರತಿವಾದಿ ) ರವರ ಆಸ್ತಿ ಬರುತ್ತದೆ . ಗ್ರಾಮ ಪಂಚಾಯಿತಿಯ ಆಸ್ತಿ ಸಂಖ್ಯೆ 205/254 ಪೂರ್ವ ಪಶ್ಚಿಮ 48 ಅಡಿ ಉತ್ತರ ದಕ್ಷಿಣ 70 ಅಡಿ 02 ನೇ ಪ್ರತಿವಾದಿಯ ತಂದೆಯ ಹೆಸರಿಗೆ ಇರುತ್ತದೆ ಎಂದರೆ ಸರಿ. ಅದರಲ್ಲಿ ಪೂರ್ವ ಪಶ್ಚಿಮ 16 ಅಡಿ ಉತ್ತರ ದಕ್ಷಿಣ 70 ಅಡಿ ಎಂದರೆ ಸರಿ. ಖಾಲಿ ಜಾಗ ಇದ್ದು ಗ್ರಾಮ

ಪಂಚಾಯಿತಿ ರವರು ಖಾತೆ ಬದಲಾವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಅದರಲ್ಲಿಪೂರ್ವ ಪಶ್ಚಿಮ 16 ಅಡಿ ಉತ್ತರ ದಕ್ಷಿಣ 40 ಅಡಿ ರಲ್ಲಿ ಗ್ರಾಮ ಪಂಚಾಯಿತಿಯಿಂ ಲೈಸೆನ್ಸ್ ಪಡೆದುಕೊಂಡು ಮನೆ ಕಟ್ಟುತ್ತಿದ್ದಾರೆ ಎಂದರೆ ಸರಿ. ಈಗ ಪಾಯ ಹಾಕಲಾಗಿರುತ್ತದೆ .

ವಾದಿಯವರ ಗಂಡ 02 ನೇ ಪ್ರತಿವಾದಿಗೆ ಮನೆಕಟ್ಟಲು ತೊಂದರೆ ಕೊಡುತ್ತಿದ್ದಾರೆ ಎಂದರೆ ಸರಿ.

ಕಾಲಾವಕಾಶ ಕೊರಿದ್ದು , ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಸಿ/ಸಿ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.